ಮೂಲ ದಾವಾ ಃ 120-2016 ಪಿಡಬ್ಲು-2

ಸಾಕ್ಷಿಯನ್ನು ದಿನಾಂಕಃ 15.11.2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎಸ್ ಟಿ ಟಿ ವಕೀಲರಿಂದ

ವಾದಿಯರು ಯಾವ ಉದ್ದೇಶಕ್ಕೆ ದಾವೆ ಸಲ್ಲಿಸಿದ್ದಾರೆ ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿಲ್ಲ. ನಾನು ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿದ್ದೇನೆ. ಸದರಿ ಖರೀದಿ ಕರಾರು ಪತ್ರವು ಸುಮಾರು 12 ವರ್ಷದ ಹಿಂದೆ ಆಗಿದೆ. ಸದರಿ ಪತ್ರವು ನೊಂದಾಯಿತವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಯಾವ ದಿನದಂದು ಪತ್ರ ಆಗಿದೆ ಅಂತ ಗೊತ್ತಿಲ್ಲ. ಖರೀದಿ ಪತ್ರದ ಪ್ರಕಾರ ವಾದಿಯರು ದಾವಾ ಆಸ್ತಿಯಲ್ಲಿ ದನ ಕಟ್ಟುವ ಶೆಡ್ ಹಾಕಿಕೊಂಡು ತಮ್ಮ ಸ್ವಂತ ಕಬ್ಜಾ ವಹಿವಾಟನ್ನು ಇಟ್ಟುಕೊಂಡಿದ್ದಾರೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ನಂಬರ, ಚೆಕ್ಕುಬಂಧಿ, ಅಳತೆ ಬಗ್ಗೆ ಗೊತ್ತಿಲ್ಲ.

ದಾವಾ ಆಸ್ತಿಯು ಮೂಲತಃ ಸಿದ್ದಪ್ಪ ಹುಲಗೂರು ಎಂಬುವವರಿಗೆ ಸೇರಿತ್ತು ಅಂದರೆ ಸರಿ. ಸಿದ್ದಪ್ಪ ಹುಲಗೂರುರವರು ಪ್ರತಿವಾದಿಯರನ್ನು ತಮ್ಮ ವಾರಸುದಾರರನ್ನಾಗಿ ಬಿಟ್ಟು ಮೃತರಾಗಿದ್ದಾರೆ ಅಂದರೆ ಸರಿ. ಪ್ರತಿವಾದಿಯರು ವಾರ್ಸನಾತೆಯಿಂದ ದಾವಾ ಆಸ್ತಿಯ ಇವತ್ತಿನವರೆಗೆ ಕಬ್ಜಾ ಹೊಂದಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯು ಶೇತ್ಕಿ ಜಮೀನು ಅಂದರೆ ಸರಿ. ಸದರಿ ಆಸ್ತಿ ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತನೆ ಆಗಿಲ್ಲ ಅಂದೆರ ಸರಿ. ಸಾಮಾನ್ಯವಾಗಿ ಶೇತ್ಕಿ ಜಮೀನುಗಳು ಪಂಚಾಯಿತಿ ವ್ಯಾಪ್ತಿಗೆ ನಮೂದಾಗುವುದಿಲ್ಲ ಅಂದರೆ ಸರಿಯಲ್ಲ. ಯಾವುದೇ ಆಸ್ತಿ ಪರಿವರ್ತನೆ ಆಗದೇ ಪಂಚಾಯಿತಿ ವ್ಯಾಪ್ತಿಗೆ ಸೇರುವುದಿಲ್ಲ ಅಂದರೆ ಸರಿಯಲ್ಲ. ಪಂಚಾಯಿತಿ ದಾಖಲೆಗಳಲ್ಲಿ ಖೊಟ್ಟಿಯಾಗಿ ನಮೂದಾಗಿದೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೊದಲಿನಿಂದಲೂ ಇಲ್ಲಿಯವರೆಗೂ ಪ್ರತಿವಾದಿಯರೇ ಇದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ವಾದಿ ಮತ್ತು 1ನೇ ಪ್ರತಿವಾದಿ ಗಂಡನ ನಡುವೆ ಯಾವುದೇ ವ್ಯಾಜ್ಯ ಆಗಿಲ್ಲ ಅಂದರೆ ಸರಿ. ಅದೇ ರೀತಿ ಪ್ರತಿವಾದಿಯರ ನಡುವೆ ಯಾವುದೇ ವ್ಯಾಜ್ಯ ಉಂಟಾಗಿಲ್ಲ ಅಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯು ನನ್ನ ಸ್ನೇಹಿತರಿದ್ದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ